ದಿನಾಂಕಃ25-06-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

ದಾವೆಯನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನು ಮಾಹಿತಿಯನ್ನು ನೀಡಿದ್ದೆನು. ದಾವಾಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ದಾವಾಸ್ವತ್ತು ಈಗ ನನ್ನ ಅಜ್ಜ ಕುಲುಮೆ ರಂಗಪ್ಪನ ಹೆಸರಿನಲ್ಲಿದೆ. ಕುಲುಮೆ ರಂಗಪ್ಪನವರಿಗೆ ಮಂಜೂರಾತಿ ಮೂಲಕ ದಾವಾಸ್ವತ್ತು ಬಂದಿರುತ್ತದೆ. ಆ ಕುರಿತು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. 1940 ರಿಂದಲೂ ಸಹಾ ನನ್ನ ಅಜ್ಜನಾದ ಕುಲುಮೆ ರಂಗಪ್ಪನ ಹೆಸರಿನಲ್ಲಿ ದಾವಾ ಸ್ವತ್ತು ಇದೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಅಜ್ಜ ತಿಮ್ಮಯ್ಯ, ನನ್ನ ತಂದೆ 1 ನೇ ವಾದಿ ಹಾಗೂ ನನ್ನ ಹೆಸರಿನಲ್ಲಿ ಯಾವುದೇ ದಾಖಲಾತಿಗಳು ಇಲ್ಲ. ನಮ್ಮ ಹೆಸರಿನಲ್ಲಿ ದಾವಾ ಸ್ವತ್ತು ಇರುವ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವಾಸ್ವತ್ತಿನ ಹಳೆಯ ಅಸೆಸ್‌ಮೆಂಟ್ ಸಂಖ್ಯೆಃ1047. ಹೊಸ ಸಂಖ್ಯೆಃ2150 ಆಗಿದೆ. ದಾವಾಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ನಾರಾಯಣಪುರದ ಬಸಪ್ಪನ ಸ್ವತ್ತು, ಪಶ್ಚಿಮಕ್ಕೆ ಬೆಳ್ಳುಳ್ಳಿ ತಿಮ್ಮಣ್ಣನ ಸ್ವತ್ತು, ಉತ್ತರಕ್ಕೆ ಪ್ರತಿವಾದಿಯರ ಸ್ವತ್ತು, ದಕ್ಷಿಣಕ್ಕೆ ರಸ್ತೆ. ದಾವಾಸ್ವತ್ತು ಪೂರ್ವ ಪಶ್ಚಿಮ 14 ಅಡಿ ಮತ್ತು ಉತ್ತರ ದಕ್ಷಿಣ 21 ಅಡಿ ಇದೆ.

ನಮ್ಮ ಹಸರಿಗೆ ಪ್ರಸ್ತುತ ಈ ಮೇಲ್ಕಂಡ ಸ್ವತ್ತನ್ನು ಇ-ಸ್ವತ್ತಿನ ಅಡಿಯಲ್ಲಿ ಖಾತೆ ಮಾಡಿಲ್ಲ. ನನ್ನ ತಂದೆಯ ಅಜ್ಜ ಕುಲುಮೆ ರಂಗಪ್ಪನ ಹೆಸರಿನಲ್ಲಿಯೂ ಸಹಾ ಇ-ಸ್ವತ್ತಿನ ಖಾತೆ ಇಲ್ಲ. ದಾವಾಸ್ವತ್ತಿನಲ್ಲಿ ನಾವು ಸ್ವಾಧೀನ ಇರುವ ಬಗ್ಗೆ ರಾಜಸ್ವ ನಿರೀಕ್ಷಕರು ನೀಡಿರುವ ವರದಿ, ಹಾಗೂ ಪುರಸಭೆ ನಡವಳಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾಸ್ವತ್ತಿನ ಕುರಿತು ಮಾಲೀಕತ್ವವನ್ನು ನಿರ್ಣಯಿಸಲು ಖಾತಾ ಎಕ್ಸ್ ಟ್ರ್ಯಾಕ್ಟ್ ಮತ್ತು ಕಂದಾಯ ಪಾವತಿಸಿರುವ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಈ ಮೇಲ್ಕಂಡ ಚೆಕ್ಕುಬಂದಿಗೆ ಒಳಪಟ್ಟಂತೆ ನಮ್ಮ ಕುಟುಂಬಕ್ಕೆ ಸೇರಿದ ಯಾವುದೇ ನಿವೇಶನ ಇಲ್ಲ ಬದಲಾಗಿ ಪ್ರತಿವಾದಿಯರಿಗೆ ಸೇರಿದ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರತಿವಾದಿಯರು ಹಳೆ ಅಸೆಸ್‌ಮೆಂಟ್ 5079 ಹೊಸ ಸಂಖ್ಯೆಃ2211 ರ 35X47 ರ ಸ್ವತ್ತಿಗೆ ನಾನು ಈ ಮೇಲೆ ಹೇಳಿದ ಚೆಕ್ಕುಬಂದಿಯಂತೆ ಚೆಕ್ಕುಬಂದಿಯನ್ನು ನಮೂದಿಸಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಕಡೂರಿನಲ್ಲಿ 374/2013 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

ಪ್ರತಿವಾದಿಯರು ಸದರಿ ಪ್ರಕರಣ ಸಲ್ಲಿಸುವ ಪೂರ್ವದಲ್ಲಿ ನಾವು ಪ್ರತಿವಾದಿಯರ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಿರಲಿಲ್ಲ ಎಂದರೆ ಸರಿ. ಪ್ರತಿವಾದಿಯರು ದಾವೆ ಸಲ್ಲಿಸಿದ ನಂತರ ನಾವು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿ ಪ್ರತಿವಾದಿಯರ ಸ್ವತ್ತು ಮತ್ತು ನಮ್ಮ ಸ್ವತ್ತು ಬೇರೆ ಬೇರೆ ಎಂದು ಹೇಳುತ್ತಾರೆ. ನಮ್ಮ ಸ್ವತ್ತಿಗೆ ತಕರಾರು ಮಾಡದ ಕಾರಣ ಪ್ರತಿವಾದಿಯರು

ದಾವೆ ಸಲ್ಲಿಸುವ ಪೂರ್ವದಲ್ಲಿ ನಾವು ದಾವೆಯನ್ನು ಸಲ್ಲಿಸಿರಲಿಲ್ಲ. ದಾವಾ ಚೆಕ್ಕುಬಂದಿಗೆ ಒಳಪಟ್ಟ ಸ್ವತ್ತನ್ನು 1 ನೇ ಪ್ರತಿವಾದಿಯ ಪತಿ ಮರುಡಪ್ಪ ಬಿನ್ ಸಿದ್ದಪ್ಪ ರವರಿಂದ ದಿಃ06-09-1994 ರಂದು ಖರೀದಿಸಿದ್ದರು ಎಂದರೆ ಸಾಕ್ಷಿ ಅವರು ಖರೀದಿಸಿರುವ ಸ್ವತ್ತೇ ಬೇರೆ ನಮ್ಮ ಸ್ವತ್ತೇ ಬೇರೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಅವರಿಗೆ ಸೇರಿದ 35X47 ಅಡಿಗಳ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಿಃ11-10-2012 ರಂದು ದಾವಾಸ್ವತ್ತನ್ನು ಅಳತೆ ಮಾಡಿಕೊಡುವಂತೆ ಪುರಸಭೆ, ಬೀರೂರುರವರಿಗೆ ನನ್ನ ತಂದೆ ಅರ್ಜಿ ನೀಡಿದ್ದರು ಎಂದರೆ ಸರಿ. ಅದರಂತೆ ಪುರಸಭೆ ಬೀರೂರುರವರು ಪ್ರತಿವಾದಿಯರು ಮತ್ತು ನಮಗೆ ನೋಟೀಸನ್ನು ನೀಡಿ ಅಳತೆ ಕಾರ್ಯಕ್ಕೆ ಬಂದಿದ್ದರು ಎಂದರೆ ಸರಿ.

ಸದರಿ ಕಾಲಕ್ಕೆ ಪುರಸಭೆರವರು 2150 ರಂತೆ ಯಾವುದೇ ಸ್ವತ್ತು ಅಸ್ತಿತ್ವದಲ್ಲಿಲ್ಲ ಬದಲಾಗಿ 2211 ರಂತೆ 35X47 ಅಡಿಗಳ ಸ್ವತ್ತು ಇರುವ ಬಗ್ಗೆ ವರದಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೀರೂರು ಪುರಸಭೆಯಲ್ಲಿ ನಮ್ಮ ಕುಟುಂಬದ ಯಾರ ಹೆಸರಿನಲ್ಲಿಯೂ ಸಹಾ ಯಾವ ದಾಖಲಾತಿಗಳೂ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಅಕ್ಕಪಕ್ಕದಲ್ಲಿ ನಮ್ಮ ಸಮುದಾಯಕ್ಕೆ ಸೇರಿದ ಕುಟುಂಬದವರು ವಾಸವಾಗಿದ್ದಾರೆ. ದಾವಾ ಚೆಕ್ಕುಬಂದಿಗೆ ಒಳಪಟ್ಟಂತೆ ಯಾರೂ ಇಲ್ಲ. ನಿಪಿ-14 ರಂತೆ ನಮ್ಮ ಮುತ್ತಜ್ಜನಾದ ಕುಲುಮೆ ರಂಗಪ್ಪನ ಹೆಸರಿನಲ್ಲಿ 22X15 ಅಡಿ ನಿವೇಶನದ ಕುರಿತು ನಮೂದು ಇದೆ ಎಂದರೆ ಸರಿ. ಬೇರೆ ಬೇರೆಯವರಿಗೆ ಬೇರೆ ಬೇರೆ ವಿಸ್ತೀರ್ಣದ ನಿವೇಶನವನ್ನು ನೀಡಿರುತ್ತಾರೆ ಎಂದರೆ ಸರಿ. ಪುರಸಭೆಯ ನಿಯಮದಂತೆ ಎಲ್ಲಾ ಮಂಜೂರಾತಿದಾರರಿಗೂ ಸಹಾ ಒಂದೇ ವಿಸ್ತೀರ್ಣದ ನಿವೇಶನವನ್ನು ನೀಡುತ್ತಾರೆ ಎಂದರೆ ಸರಿಯಲ್ಲ.

ನಿಪಿ-14 ಅನ್ನು ಹೊರತುಪಡಿಸಿ ಇತರೆ ಯಾವ ದಾಖಲಾತಿಯನ್ನು ಸಹಾ ನಮ್ಮ ಮುತ್ತಜ್ಜನಾದ ಕುಲುಮೆ ರಂಗಪ್ಪನ ಹೆಸರಿನಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ಕಂದಾಯ ರಸೀದಿಗಳನ್ನು ನಾವು ಇತ್ತೀಚೆಗೆ ಕಂದಾಯ ಪಾವತಿ ಮಾಡಿ ಪ್ರಕರಣದ ಸಲುವಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿ ಗಳನ್ನು ಪ್ರಕರಣದ ಸಲುವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ವಿಸ್ತೀರ್ಣ ಮತ್ತು ಚೆಕ್ಕುಬಂದಿಯಂತೆ ನಮೂದಿಸಿರುವ ಸ್ವತ್ತು ನಮಗೆ ಸೇರದ ಕಾರಣ ನಾವು ಸ್ವಾಧೀನತೆಯಲ್ಲಿ ಇದದ್ದೇವೆ ಎಂಬುದನ್ನು ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರಿಗೆ ಸೇರಿದ ಸ್ವತ್ತಿನ ಸ್ವಾಧೀನತೆ ಹೊಂದಿರುವುದರಿಂದ ನಮ್ಮ ಸ್ವತ್ತಿನ ಬಗ್ಗೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಚೆಕ್ಕುಬಂದಿಗೆ ಒಳಪಟ್ಟ ಸ್ವತ್ತಿಗೆ ಪ್ರತಿವಾದಿಯರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬಕ್ಕೆ ಸೇರಿದ ದಾವಾ ಚೆಕ್ಕುಬಂದಿಗೆ ಒಳಪಟ್ಟ ಸ್ವತ್ತನ್ನು ಕಬಳಿಸಲು ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
1 ನೇಃಹೆಃ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.